ಅಥವಾ ಅದು ಸಣ್ಣ ನೀರಾವರಿಯಲ್ಲಿ ಬರುವುದಿಲ್ಲ. ದೊಡ್ಡ ನೀರಾವರಿಯಲ್ಲಿ ಬರುವುದಿಲ್ಲ ಎಂದು ಹಾರಿಕೆ ಮಾತುಗಳನ್ನು ಹೇಳುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಅದು ಹಾರಿಕೆಯ ಮಾತಲ್ಲ. ಅಲ್ಲಿರತಕ್ಕ ವಾಸ್ತವವಾದ ವಿಷಯಗಳನ್ನು ಪರಿಶೀಲನೆಮಾಡಿ ಈ ಯೋಜನೆಯಲ್ಲಿ ಇದನ್ನು ತೆಗೆದುಕೊಂಡಿದ್ದೇವೆ. ಏತಕ್ಕೋಸ್ಕರ ಈ ಯೋಜನೆಯನ್ನು ತೆಗೆದುಕೊಂಡಿದ್ದೇವೆ ಎಂದರೆ ಆ ಸ್ಥಳದಲ್ಲಿ ಬರತಕ್ಕ ನೀರನ್ನು ಅಡ್ಡಗಟ್ಟಿ ತೆಂಗಿನ ಗಿಡದಿಂದ ಸಬ್ ಸಾಯಿಲ್ ಆಚೆ ಹೋಗದ ಹಾಗೆ ಬಚಾವ್ ಮಾಡಬೇಕು ಎನ್ನುವ ದೃಷ್ಟಿಯಿಂದ ಈ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಈ ಯೋಜನೆಯ ಪ್ರಕಾರ ಬೌಂಡರಿಮೆಂಟ್ ಲೆವಿ ಆಗಲೀ ಅಥವಾ ಯಾವುದೇ ಲೆವಿ ಹಾಕುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಸಾಯಿಲ್ ಕನ್ಸರ್‌ವೇಷನ್ ಯೋಜನೆಯ ಪ್ರಕಾರ ಇಂಥಾ ಕೆಲಸಗಳನ್ನು ತೆಗೆದುಕೊಂಡರೆ ಸಾಧ್ಯವಾದಮಟ್ಟಿಗೆ ರೈತರಿಗೆ ಪ್ರಯೋಜನವಾಗಬಹುದು ಎನ್ನುವ ದೃಷ್ಟಿಯಿಂದ 1968 ನೇ ಇಸವಿಯಿಂದ ಮೈನರ್ ಇರಿಗೇಷನ್‌ನಲ್ಲಿ ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಇದನ್ನು ಸಾಯಿಲ್ ಕನ್‌ಸರ್‌ವೇಷನ್ ಯೋಜನೆಯನ್ನು ತೆಗೆದುಕೊಳ್ಳಬೇಕು ಎಂದು ಸರ್ಕಾರಿ ಆರ್ಡರನ್ನು ಮಾಡಿದ್ದೇವೆ.

ಶ್ರೀ ಎಂ. ನಾಗಪ್ಪ.—ಸ್ವಾಮಿ ಈಗ ತಾವು ಅಪ್ಪಣೆ ಕೊಡಿಸಿದಿರಿ ಮೈನರ್ ಇರಿಗೇಷನ್ ಮುಖಾಂತರ ಈ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಸಾಯಿಲ್ ಕನ್‌ಸರ್‌ವೇಷನ್ ಯೋಜನೆಯ ಮುಖಾಂತರ ಈ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ ಎಂದು. ಸಾಯಿಲ್ ಕನ್‌ಸರ್‌ವೇಷನ್ ಯೋಜನೆಯಲ್ಲಿ ಬಂಡಿಂಗ್ ಹಾಕುವುದಕ್ಕೆ ಸಾಕಷ್ಟು ದುಡ್ಡನ್ನು ಒದಗಿಸುತ್ತಾ ಇಲ್ಲ. ಆದ್ದರಿಂದ ಇಂಥಾ ಕೆಲಸಗಳನ್ನು ತೆಗೆದುಕೊಳ್ಳತಕ್ಕ ಯೋಜನೆಗಳು ಪುಸ್ತಕದಲ್ಲಿಯೇ ನಿಂತು ಹೋಗುವುದರಿಂದ ಅವು ಕಾರ್ಯಗತವಾಗುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ಈ ಕೆಲಸಗಳಿಗೆ ಸಾಕಷ್ಟು ಹಣವನ್ನು ಅಗ್ರಿಕಲ್‌ಚರರ್ ಡಿಪಾರ್ಟ್‌ಮೆಂಟಿಗೆ ಒದಗಿಸಿ, ಪಿ. ಡಬ್ಲ್ಯು. ಏಜೆನ್ಸಿ ಮುಖಾಂತರ ಆ ಕೆಲಸ ಮಾಡಿಸುವ ವ್ಯವಸ್ಥೆ ಮಾಡುತ್ತೀರಾ ?

Sri D. PARAMESWARAPPA.—It is a suggestion for action.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತೆಂಗಿನಗಿಡಗಳನ್ನು ಬೆಳೆಸುವುದು ಕೆಲವಾರು ತಾಲ್ಲೂಕ್‌ಗಳಿಗೆ ಮಿತಿಗೊಂಡಿದೆ. ಭೂ ಅಭಿವೃದ್ಧಿ ಯೋಜನೆಯ ಅಥವಾ ಭೂಸಾರ ರಕ್ಷಣಾ ಯೋಜನೆಯ ಮೇರೆಗೆ ಈ ಯೋಜನೆಗಳನ್ನು ಕೈಕೊಳ್ಳಬೇಕೆಂದು ತೀರ್ಮಾನಿಸಲಾಯಿತು ಎಂದು ಹೇಳಿದ್ದೀರಿ. ಅಂದರೆ ಯಾವ ಪ್ರದೇಶಗಳಲ್ಲಿ ಈ ಗಿಡಗಳನ್ನು ಬೆಳೆಸಬಹುದು ಎಂದು ಮನಗೊಂಡಿದ್ದೀರಿ, ಎಷ್ಟು ಕೆಲಸವನ್ನು ಮಾಡಿದ್ದೀರಿ, ಎಷ್ಟು ಕೆಲಸವನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೀರಿ, ಮತ್ತು ಎಷ್ಟೆಷ್ಟು ಹಣವನ್ನು ಒದಗಿಸಬೇಕೆಂದು ತೀರ್ಮಾನ ಮಾಡಿದ್ದೀರಿ ?

ಶ್ರೀ ಡಿ. ಪರಮೇಶ್ವರಪ್ಪ.—ಸಾಯಿಲ್ ಕನ್ಸರ್‌ವೇಷನ್ ಸ್ಕೀಮ್‌ಗೆ ಹಣವನ್ನು ಒದಗಿಸಿದ್ದೇವೆ. ಆದರೆ ಒಂದು ದೃಷ್ಟಿಯಲ್ಲಿ ಸಾಯಿಲ್ ಕನ್ಸರ್‌ವೇಷನ್ ಸ್ಕೀಮ್ ಆದರೂ, ಎಷ್ಟರಮಟ್ಟಿಗೆ ಸಾಧನೆ ಮಾಡಿದ್ದೇವೆ ಎಂಬ ಬಗ್ಗೆ ಫಿಗರ್ಸ್ ನನ್ನಲ್ಲಿ ಇಲ್ಲ. ನನ್ನ ಸ್ನೇಹಿತರ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಕಾರ್ಯಗತ ಮಾಡುವುದಕ್ಕೆ ಬೇಕಾದಷ್ಟು ಅವಕಾಶಗಳಿವೆ.

Reservation of Posts

429. Sri K. H. RANGANATH (Mudigere).—

Will the Chief Minister be pleased to state :—

(*a*) the total number of persons belonging to the Scheduled castes and Scheduled Tribes that are working in Class I and II Posts in all the Departments ;

(*b*) whether classifications of posts is being done annully in all the Departments and if so, the vacancies filled up in accordance with it ;

(SRI K. H. RANGANATH)

(*c*) the number of vacancies that occurred in all categories during 1965-66, 1966-67 and 1967-68 and the number that were filled in 'C' category ?

Sri VEERENDRA PATIL (Chief Minister).—

(*a*)—

	Class I	*Class II*
Scheduled Caste	103	199
Scheduled Tribe	4	6

(*b*) There is no system of classification of posts. Reservation for the Backward Classes, Scheduled Castes and Scheduled Tribes is made at the time of direct recruitment against the vacancies in question subject to the availability of suitable candidates.

(*c*) 1965-66 ... 1335
1966-67 ... 1068
1967-68 ... 1038

There is no such category as 'C'. The number filled from Scheduled Castes and Scheduled Tribes is 143.

ಶ್ರೀ ಕೆ. ಎಚ್. ರಂಗನಾಥ್.—(ಅ) ಪ್ರಶ್ನೆಗೆ ಉತ್ತರವಾಗಿ ಕೆಲವು ಸಂಖ್ಯೆಗಳನ್ನು ಕೊಟ್ಟಿದ್ದೀರಿ. ಈ ಮೊದಲನೆ ಮತ್ತು ಎರಡನೆಯ ವರ್ಗಗಳಿಗೆ ಸೇರಿದ ವ್ಯಕ್ತಿಗಳು ಯಾವ ಯಾವ ಇಲಾಖೆಗಳಲ್ಲಿ ಎಷ್ಟೆಷ್ಟು ಜನ ಇದ್ದಾರೆ ಎಂಬುದನ್ನು ಹೇಳುತ್ತೀರಾ ?

† ಶ್ರೀ ವೀರೇಂದ್ರ ಪಾಟೀಲ್.—ಇದು ದೊಡ್ಡ ಸ್ಟೇಟ್‌ಮೆಂಟ್ ಆಗುತ್ತದೆ. ಇವತ್ತು ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—(ಇ) ಪ್ರಶ್ನೆಗೆ ಉತ್ತರವಾಗಿ 'ಸಿ' ವರ್ಗವೆಂದು ಹೇಳಲಾಗುವ ವರ್ಗವಿರುವುದಿಲ್ಲ ಎಂದು ಹೇಳಿದ್ದೀರಿ. ಯಾವ ಆಧಾರದ ಮೇಲೆ ಇವರನ್ನು ನೇಮಕಮಾಡಲು ಹುದ್ದೆಗಳನ್ನು ಮೀಸಲಡುತ್ತಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಮೊದಲು ಎ.ಬಿ.ಸಿ. ಎಂಬ ಕ್ಲಾಸ್‌ಗಳು ಇದ್ದವು. ಈಗ ಆ ಪದ್ಧತಿ ಇಲ್ಲ. ತಾರೀಖು 16-9-1963ರಲ್ಲಿ ಹೊಸದಾಗಿ ಒಂದು ಆರ್ಡರ್ ಜಾರಿಯಾಗಿದೆ. ಅದರ ಪ್ರಕಾರ ಮಾಡುತ್ತಿದ್ದೇವೆ. ರಿಜರ್‌ವೇಷನನ್ನು ಯಾವ ರೀತಿ ತುಂಬಬೇಕು ಎಂಬುದಕ್ಕೂ ಕೂಡ ಆರ್ಡರ್ ಆಗಿದೆ. ಆ ಆರ್ಡರ್ ಪ್ರಕಾರ ಮಾಡುತ್ತಿದ್ದೇವೆ.

Sri J. P. SARWESH.—It is mentioned in the answer that there are 103 Class I and 199 Class II officers. Could you give the percentage ?

Mr. SPEAKER.—The hon. Member may work it out.

Sri G. DUGGAPPA.—Supplementary to (*c*): How many of these vacancies are Class I, Class II and Class III have all these posts been filled up ? what is the method of filling up these vacancies ? Is it by direct recruitment or by promotion ? How many of them have been reserved for Scheduled Castes and whether the quota set apart for them has been given ?

Sri VEERENDRA PATIL.—It is very long question and it is very difficult to reply all the four or five questions that have been put. As

the Hon. Members are aware, all the Class I, Class II and even Class III posts are filled up through the Public Service Commission. There is a certain procedure; the Public Service Commission advertises the posts, interviews the candidates and then selects the candidates and sents a list and on the basis of the list the Government makes appointments.

Mr. SPEAKER.—The hon. Member wants the break-up of Class I, Class II and Class III posts; that information may be placed on the table of the House.

Sri VEERENDRA PATIL.—Yes.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್.—ಇದರಲ್ಲಿ ಡೈರೆಕ್ಟ್ ರೆಕ್ರೂಟ್‌ಮೆಂಟ್ ಎಂದು ನೇಮಕ ಮಾಡುವಾಗ ಕೇಡರು ಹಾಗೂ ರೆಕ್ರೂಟುಮೆಂಟು ರೂಲ್ಸು ಪ್ರಕಾರ ಶೇಕಡ 15 ಮತ್ತು ಶೇಕಡ ಮೂರರಷ್ಟು ಪರ್ಸಂಟೇಜನ್ನು ಷೆಡ್ಯೂಲು ಕ್ಯಾಸ್ಟು ಭರ್ಗದವರಿಗೆ ಕೊಡರಾಗಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಇದರ ಎಂಟೈರ್ ಬ್ರೇಕ್‌ಅಪ್‌ನ್ನು ಈಗ ಹೇಳುವುದಕ್ಕೆ ಆಗುವುದಿಲ್ಲ. ಮಾನ್ಯ ಸದಸ್ಯರು ಕೇಳಿದ ಹಾಗೆ ಶೇಕಡಾ 15 ಮತ್ತು ಶೇಕಡಾ 3 ರಷ್ಟು ಪರ್ಸಂಟೇಜು ಕೆಲವು ಕಡೆಗಳಲ್ಲಿ ಕೊಡಬೆ ಇರಬಹುದು. ಏಕೆಂದರೆ ಅಲ್ಲಿ ಅವರಿಗೆ ಸ್ಯೂಟಬಲ್ ಕ್ಯಾಂಡಿಡೇಟ್ಸ್‌ಗಳು ಸಿಕ್ಕಿರಲಾರರು. ಇದರಿಂದ ಕಲವು ಕಡೆಗಳಲ್ಲಿ ಪೂರ್ತಿ ಪರ್ಸಂಟೇಜಿನಂತೆ ತುಂಬಲಾಗಲಿಕ್ಕಾಗದು ಎಂದು ನನಗನಿಸುತ್ತದೆ.

ಶ್ರೀ ಎಸ್. ಎಸ್. ಅರಕೇರಿ.—ಕಳೆದ ಐದು ವರ್ಷಗಳಲ್ಲಿ ರೋಕರ್ ಅಪಾಯಿಂಟ್‌ಮೆಂಟುಗಳನ್ನು ಮಾಡುವಾಗ ಶೇಕಡಾ 15ರಂತೆ ಷೆಡ್ಯೂಲು ವರ್ಗದವರಿಗೆ ಕೊಟ್ಟಿದ್ದೀರಾ ಹೇಗೆ?

ಶ್ರೀ ವೀರೇಂದ್ರ ಪಾಟೀಲ್.—ರೋಕರ್ ಕ್ಯಾಂಡಿಡೇಟುಗಳನ್ನು ತುಂಬುವುದರಲ್ಲಿ ಬಹುಶಃ ರಿಸರ್ವೇಷನ್ ಮಾಡುವುದಕ್ಕೆ ಹೋಗಿಲ್ಲ ಎಂದು ನಮಗೆ ಕಾಣುತ್ತದೆ. ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಜಾಹಿರಾಯಿಸಿ ಅಭ್ಯರ್ಥಿಗಳನ್ನು ಕಳುಹಿಸಬೇಕಾದರೆ ಬಹಳ ಸಮಯ ಬೇಕಾಗುತ್ತದೆ. ಇದಕ್ಕಾಗಿ ಅಲ್ಲಲ್ಲಿ ಇರುವ ಅಧಿಕಾರಿಗಳು ಅವರಿಗೆ ಸೂಕ್ತ ಕಂಡ ರೋಕರ್ ಕ್ಯಾಂಡಿಡೇಟ್ಸ್‌ಗಳನ್ನು ನೇಮಕ ಮಾಡಿಕೊಳ್ಳುತ್ತಾರೆ. ಇದರೊಳಗೆ ರಿಸರ್ವೇಷನ್ ಮಾಡಬೇಕು ಎಂದು ನನಗನಿಸುವುದಿಲ್ಲ. ಇದಕ್ಕಾಗಿ 1-1-65 ರಿಂದ ಇತ್ತೀಚೆಗೆ ಅನೇಕ ರೋಕರ್ ಕ್ಯಾಂಡಿಡೇಟ್ಸ್‌ಗಳನ್ನು ನೇಮಕ ಮಾಡಿರುವುದನ್ನು ರೆಗ್ಯುಲರೈಸು ಮಾಡಬೇಕು ಎಂದೂ ಅವರ ಸರ್ವಿಸುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕೆಂದೂ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರಿಗೆ ನೂಚನೆಗಳನ್ನು ಕೂಡ ಕೊಡಲಾಗಿದೆ. ಇದರ ಬಗ್ಗೆ ಎಲ್ಲರಿಗೂ ಸಮಾನವಾದ ಪರ್ಸಂಟೇಜನ್ನು ಅವರು ಹೇಗೆ ಕೊಡಬಹುದು ಎನ್ನುವುದನ್ನು ಅವರು ವಿಚಾರ ಮಾಡುತ್ತಾರೆ.

ಶ್ರೀ ಎ. ಮುನಿಯಪ್ಪ.—ರೋಕರ್ ಕ್ಯಾಂಡಿಡೇಟುಗಳನ್ನು ನೇಮಕ ಮಾಡುವಾಗ ಹರಿಜನರಿಗೆ ಅನ್ಯಾಯ ಮಾಡುತ್ತಿರುವುದರ ಬಗ್ಗೆ ಸರಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ?

ಶ್ರೀ ವೀರೇಂದ್ರ ಪಾಟೀಲ್.—ರೋಕರ್ ಕ್ಯಾಂಡಿಡೇಟುಗಳ ಸರ್ವಿಸ್ಸನ್ನು ರೆಗ್ಯುಲರೈಸು ಮಾಡುವಾಗ ಮೊದಲು ಎಷ್ಟು ರೋಕರ್ ಕ್ಯಾಂಡಿಡೇಟುಗಳ ವೇಕೆನ್ಸಿಗಳಿತ್ತು ಅದರ ಪ್ರಕಾರ ಪಿ.ಎಸ್.ಸಿ.ಯವರು ನೋಟಿಫೈ ಮಾಡುತ್ತಾರೆ ಮತ್ತು ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ರೂಲ್ಸು ಪ್ರಕಾರ ಇವರನ್ನು ತುಂಬುವಾಗ ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ಮಾಡುತ್ತಾರೆ ಎಂದು ನಾನು ನಂಬುತ್ತೇನೆ.

ಶ್ರೀಮತಿ ಚಂಪಾವತಿ ಬೋಗರೆ.—ರೋಕರ್ ಕ್ಯಾಂಡಿಡೇಟುಗಳನ್ನು ಬೇರೆ ಕಡೆ ನೇಮಿಸಬೇಕು ಎಂದು ಪಬ್ಲಿಕ್ ಸರ್ವಿಸ್ ಕಮಿಷನ್ ಕಡೆಗೆ ಬಂದಾಗ ಅವರಿಗೆ ಏಜ್ ಬಾರ್ ಆಗುತ್ತದೆ ಎಂದು ಹೇಳುತ್ತಾರೆ. ಇದರ ಬಗ್ಗೆ ಸರಕಾರ ಏನು ಮಾಡುತ್ತಾರೆ?

ಶ್ರೀ ವೀರೇಂದ್ರ ಪಾಟೀಲ್.—ಇದನ್ನು ಸ್ಪಷ್ಟವಾಗಿ ಹೇಳಿದ್ದೇವೆ. ರೋಕರ್ ಕ್ಯಾಂಡಿಡೇಟುಗಳಾಗಿ ಕೆಲಸ ಮಾಡುವವರಿಗೆ ಮೊದಲು ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಕೆಲಸಕ್ಕೆ ತೆಗೆದುಕೊಳ್ಳುವಾಗ ಅವರ ಹಿಂದಿನ ಸರ್ವಿಸ್ಸನ್ನೂ ಲೆಕ್ಕಕ್ಕೆ ತೆಗೆದುಕೊಳ್ಳುತ್ತಾರೆ. ಆಗ ಅವರಿಗೆ ಏಜ್ ಬಾರ್ ಬರುವುದಿಲ್ಲ.

ಶ್ರೀ ಹೆಚ್. ಪುಟ್ಟಸ್ವಾಮಿ.—ರೋಸ್ಟರ್ ಅಪಾಯಿಂಟುಮೆಂಟುಗಳನ್ನು ಮಾಡುವಾಗ ಆಯಾ ಯುನಿಟ್ ಆಫೀಸರುಗಳೇ ನೋಟಿಫಿಕೇಷನ್ನುಗಳನ್ನು ಕೊಟ್ಟು ನೇಮಿಸಲು ಸಾಧ್ಯವಾಗುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಇದರ ಸಲುವಾಗಿಯೇ ಇವೆಲ್ಲವನ್ನೂ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರಿಗೇ ಕೊಡಲಾಗಿದೆ. ಅವರೇ ಎಲ್ಲಿ ರಿಸರ್ವೇಷನ್ ಕೊಡಲು ಸಾಧ್ಯವೋ ಅದನ್ನು ನೋಡಿಕೊಂಡು ಮಾಡುತ್ತಾರೆ.

1-00 P.M.

ಶ್ರೀ ಕೆ. ಪ್ರಭಾಕರ್.—ಸ್ವಾಮಿ, ಅಪಾಯಿಂಟ್‌ಮೆಂಟ್‌ಗಳಲ್ಲಿ ಇರತಕ್ಕ ನ್ಯೂನತೆಗಳನ್ನು ಸರಿಮಾಡುವುದಕ್ಕೆ ಸರ್ಕಾರದವರು ಇತ್ತೀಚೆಗೆ ಒಂದು ಕ್ಯಾಬಿನೆಟ್ ಸಬ್ ಕಮಿಟಿ ಮಾಡಿದ್ದಾರೆ. ಅವರು ಏನಾದರೂ ಇದರ ಬಗ್ಗೆ ನುಧಾರಣೆ ಮಾಡಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಈ ರೀತಿ ಅನೇಕ ದೂರುಗಳು ಬಂದಿವೆ. ಅವರಿಗೆ ಏನು ರಿಸರ್ವೇಷನ್ ಕೋಟಾ ಕೊಡಬೇಕೋ ಅದನ್ನು ಪರಿಶೀಲನೆ ಮಾಡುತ್ತಾರೆ. ಈ ರೀತಿ ಕಂಪ್ಲೈಂಟ್ ಇರುವಾರದು ಎನ್ನುವ ದೃಷ್ಟಿಯಿಂದ ಸೆಕ್ರಟೇರಿಯೇಟ್‌ನಲ್ಲಿ ಒಂದು ಸೆಲ್ ಮಾಡಿದ್ದೇವೆ. ಅವರೇ ಈ ಕೆಲಸವನ್ನು ಪರಿಶೀಲನೆ ಮಾಡುತ್ತಾರೆ.

Sri H. SIDDAVEERAPPA.—Are the Government satisfied that this reservation formula has been worked so far to the satisfaction of the Scheduled Castes and Scheduled Tribes for whose protection it has been passed ? If not, what steps do the Government wish to take to see that it is fulfilled ?

Sri VEERENDRA PATIL.—This question is agitating the minds of the members of this House. So far as the Government are concerned, we are very keen that this reservation quota is filled up, but in certain cases where the Public Service Commission cannot find suitable candidates, there they become helpless. But I want to make the policy of the Government very clear. So far as we are concerned, we want to see that this reservation quota is filled up completely. That is why I said that an employment cell has been created to look into this complaint and whatever action is necessary we do not hesitate to take that action.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮೊದಲನೇ ವರ್ಗದಲ್ಲಿ 103 ಜನ, ಎರಡನೇ ವರ್ಗದಲ್ಲಿ 199 ಜನ ಇದ್ದಾರೆಂದು ಹೇಳಿದ್ದಾರೆ. ಅದರ ಪೈಕಿ ಹೆಣ್ಣುಮಕ್ಕಳಿಗೆ ಪ್ರಾತಿನಿಧ್ಯ ಎಷ್ಟು ಕೊಟ್ಟಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಹೆಣ್ಣುಮಕ್ಕಳು ಇರಬಹುದೆಂದು ನಾನು ನಂಬಿದ್ದೇನೆ. ಎಷ್ಟು ಜನ ಇದ್ದಾರೆಂದು ಹೇಳುವುದು ಕಷ್ಟವಾಗುತ್ತದೆ.

Mr. SPEAKER.—Question Hour is over. Now short notice question No. 8.

SHORT NOTICE QUESTION AND ANSWER

Termination/Dismissal of Employees of Daccan Herald/Prajavani/Sudha

8. Sri M. S. KRISHNAN (Malleswaram).—

Will the Minister for Law, Labour and Parliamentary Affairs be pleased to state :—

(*a*) whether any representation has been submitted to the Government by the 'Bangalore Newspaper Men's Union' in respect of the